ಮತ್ತು ಅವರ ಪತ್ನಿ ಅನುರಾಧಾ ಬೆನ್ ಅವರ ಬಗ್ಗೆ ಭಾವೇಶ್ ಅವರಿಗೆ ಬಹಳ ಆದರವಿತ್ತು. ಬಹಳ ವರ್ಷಗಳ ಹಿಂದೆ ಮುಂಬಯಿಯಲ್ಲಿ ಇರುವ ಭಾಟಿಯಾ ಬ್ಯಾಂಕ್‌ನ ಸಂಚಾಲಕರ ಒಂದು ಮೀಟಿಂಗ್ ಅನ್ನು ಆರ್.ಕೆ.ವಾಡಿಯಲ್ಲಿ ಇಟ್ಟಿದ್ದರು. ಆ ಸಭೆಯಲ್ಲಿ ಕೃಷ್ಣಕಾಂತ್ ಭಾಯಿ ಅವರೂ ಇದ್ದರು.

ಎನ್.ಎ.ಬಿ.ಯ ದಿನುಭಾಯಿ ಗಾಂಧೀ ಮತ್ತು ಕೃಷ್ಣಕಾಂತ್ ಭಾಯಿ ಬಹಳ ಆತ್ಮೀಯ ಸ್ನೇಹಿತರು. ದಿನುಭಾಯಿ ಭಾವೇಶ್ ಅವರಿಗೆ ಜೇಠಾ ದಂಪತಿಗಳ ಪರಿಚಯ ಮಾಡಿಸಿದ್ದರು. ಕೃಷ್ಣಕಾಂತ್ ಭಾಯಿ ದಕ್ಷಿಣ ಮುಂಬಯಿಯಲ್ಲಿ ಇರುವ ಮೂಲ್ಜೀ ಜೇಠಾ ಮಾರ್ಕೆಟ್‌ನ ಚೇರ್ಮನ್ ಆಗಿದ್ದರು. ಜೇಠಾ ಬಟ್ಟೆಯ ಮಾರ್ಕೆಟ್ ಶತಮಾನದಷ್ಟು ಹಳೆಯದು. ಒಂದು ಕಾಲಕ್ಕೆ ಈ ಮಾರ್ಕೆಟ್ ಸಂಪೂರ್ಣ ಏಷಿಯಾದಲ್ಲಿಯೇ ಅತಿ ದೊಡ್ಡ ಟೆಕ್ಸ್‌ಟೈಲ್ ಮಾರ್ಕೆಟ್ ಆಗಿತ್ತು. 900 ಮುಖ್ಯ ಅಂಗಡಿಗಳ ಜೊತೆಗೆ, 3000ದಷ್ಟು ಚಿಕ್ಕ ಅಂಗಡಿಗಳು ಆ ಮಾರ್ಕೆಟ್‌ನಲ್ಲಿ ಇದ್ದವು. ಮುಂಬಯಿಯಲ್ಲಿ ಬಟ್ಟೆಯ ಮಿಲ್‌ಗಳು ಇರುವವರೆಗೆ, ಈ ಮಾರ್ಕೆಟ್ ಬಹಳಷ್ಟು ಪ್ರಸಿದ್ಧವಿತ್ತು. ಕೃಷ್ಣಕಾಂತ್ ಭಾಯಿ ಅವರಿಗೆ ಮಹಾಬಲೇಶ್ವರದಲ್ಲಿ 'ಸ್ಪ್ರಿಂಗ್‌ಫೀಲ್ಡ್' ಹೆಸರಿನ ಒಂದು ಬಂಗಲೆ ಇದೆ. ಹಾಗೆಂದೇ ಅವರು ಮಹಾಬಲೇಶ್ವರಕ್ಕೆ ಬಹಳ ಬಾರಿ ಬಂದು ಹೋಗಿ ಮಾಡುತ್ತಾರೆ. ಅವರು ಆರ್.ಕೆ.ವಾಡಿಯ ಆ ಮೋಂಬತ್ತಿಗಳ ಸಣ್ಣ ವರ್ಕ್‌ಶಾಪ್ ನೋಡಿದಾಗ, ಭಾವೇಶ್ ಅವರ ಬಗ್ಗೆ ಅಭಿಮಾನ ಮೂಡಿತ್ತು.

ಮಹಾಬಲೇಶ್ವರಕ್ಕೆ ಬಂದಾಗಲೆಲ್ಲ, ಅವರು ಭಾವೇಶ್ ಅವರನ್ನು ಸ್ಟಾಲ್‌ನಲ್ಲಿ ಭೆಟ್ಟಿಯಾಗುತ್ತಿದ್ದರು. ಯಾವುದೋ ರೋಗದ ಕಾರಣವಾಗಿ ಅವರ ಧ್ವನಿಪೆಟ್ಟಿಗೆಯನ್ನು ತೆಗೆದು ಹಾಕಿದ್ದರು. ಹಾಗಾಗಿ ಅವರು ಮಾತನಾಡಲು ಆಗುತ್ತಿರಲಿಲ್ಲ. ಅವರೊಡನೆ ಅನುರಾಧಾ ಬೆನ್ ಇದ್ದಾಗ, ಕೃಷ್ಣಕಾಂತ್ ಅವರ ಸನ್ನೆ ಮತ್ತು ಹಾವಭಾವದಿಂದ ಅವರು ಏನು ಹೇಳಲು ಬಯಸುತ್ತಿದ್ದಾರೆ ಎಂದು ಅರ್ಥ ಮಾಡಿಕೊಂಡು ಭಾವೇಶ್ ಅವರಿಗೆ ತಿಳಿಸುತ್ತಿದ್ದರು. ಆದರೆ ಕೃಷ್ಣಕಾಂತ್ ಭಾಯಿ ಒಬ್ಬರೇ ಭಾವೇಶ್ ಅವರ ಸ್ಟಾಲ್‌ಗೆ ಬರುವಾಗ, ತಮ್ಮ ಡ್ರೈವರ್‌ನನ್ನು ಜೊತೆಯಲ್ಲಿ ಕರೆತರುತ್ತಿದ್ದರು. ಮಾತನಾಡಲು ಬಯಸಿದ್ದನ್ನು ಒಂದು ಕಾಗದದ ಮೇಲೆ ಬರೆಯುತ್ತಿದ್ದರು. ಅವರು ಬರೆದದ್ದನ್ನು ಡ್ರೈವರ್ ಓದಿ ಭಾವೇಶ್ ಅವರಿಗೆ ಕೇಳಿಸುತ್ತಿದ್ದ. ತಮ್ಮ ಹತ್ತು ಎಕರೆಯ ನಡುವಿನ ಬಂಗಲೆಯನ್ನು ಬಿಟ್ಟು, ಫುಟ್‌ಪಾತಿನ ಭಾವೇಶ್ ಅವರ ಸ್ಟಾಲ್‌ಗೆ ಬಂದು, ಅಲ್ಲಿ ಹಾಕಿದ್ದ ಕುರ್ಚಿಯಲ್ಲಿ ಕುಳಿತು ಭಾವೇಶ್ ಅವರೊಡನೆ ಬಹಳ ಹೊತ್ತು ಮಾತನಾಡುವರು. ಈ ಸ್ನೇಹ ಸಂಬಂಧಗಳು ಹೇಗೆ ಬೆಸೆದವು ಎಂದು ಅಚ್ಚರಿಯಾಗುತ್ತಿತ್ತು. ಹಾಗೆಯೇ ಎದೆಯಲ್ಲಿ ಬದುಕಿನತ್ತ ಕೃತಜ್ಞತೆಯ ಭಾವ ಮೂಡುತ್ತಿತ್ತು.

ಇದೇ ರೀತಿ ಒಂದು ದಿನ ಸಂಜೆ, ಕೃಷ್ಣಕಾಂತ್ ಭಾಯಿ ಮತ್ತು ಅನುರಾಧಾ ಬೆನ್ ಭಾವೇಶ್ ಅವರ ಭೆಟ್ಟಿಗೆ ಬಂದರು. ಸ್ಟಾಲ್‌ಗೆ ಬರುತ್ತಿದ್ದ ಪ್ರವಾಸಿಗರೊಡನೆ ಮಾತನಾಡುತ್ತಲೇ, ಭಾವೇಶ್ ಇವರೊಡನೆಯೂ ಮಾತು ಮುಂದುವರೆಸಿದ್ದರು. ಇದರ ನಡುವೆ, ಭಾವಸಾ ಮತ್ತು ಕುಸುಮ ಅವರ ದನಿ ಕೇಳಿಸಿತು. ಭಾವಸಾ ಅವರಿಗೆ ಭಾವೇಶ್ ನಮಸ್ಕಾರ ಹೇಳುತ್ತ ಅವರ ಪರಿಚಯವನ್ನು ಕೃಷ್ಣಕಾಂತ್ ಭಾಯಿಗೆ ಮಾಡಿಸಿದರು. ಅವರಿಬ್ಬರು ಬಹಳ ಉತ್ಸಾಹದಿಂದ ಮಾತನಾಡತೊಡಗಿದರು. ಇಬ್ಬರು ಮಹಿಳೆಯರೂ ಪರಸ್ಪರ ಪರಿಚಯ ಮಾಡಿಕೊಂಡರು. ಅಲ್ಲಿಂದ ಮುಂದೆ, ಪ್ರತಿ ಸಂಜೆ ಭಾವೇಶ್ ಅವರ ಬೀದಿಬದಿಯ ಆ ಪುಟ್ಟ ಸ್ಟಾಲ್, ಈ ಇಬ್ಬರು ಮಹಾನುಭಾವರ ಭೇಟಿಯ ತಾಣವಾಯಿತು. ಅವರ ನಡುವಿನ ಆತ್ಮೀಯತೆ ಕೆಲವೇ ದಿನಗಳಲ್ಲಿ ಗಾಢವಾಗಿ, ಕೆಲವೊಮ್ಮೆ ಭಾವೇಶ್ ಅವರನ್ನು ಕರೆದುಕೊಂಡು ಭಾವಸಾ ಸ್ಪ್ರಿಂಗ್‌ಫೀಲ್ಡ್ ಬಂಗಲೆಗೆ ಹೋಗುತ್ತಿದ್ದರು. ಇಲ್ಲ, ಭಾವಸಾ ಅವರ ಮನೆಯಲ್ಲಿ ಸೇರುವರು. ಕೆಲವೊಮ್ಮೆ ಸಿಂದೋಡಾದ ಆ ವರ್ಕ್‌ಶಾಪ್‌ನಲ್ಲಿಯೂ ಇವರೆಲ್ಲರ ಭೇಟಿ ಆಗುತ್ತಿತ್ತು.

ಕೃಷ್ಣಕಾಂತ್ ಭಾಯಿ ಮತ್ತು ಭಾವಸಾ, ಭಾವೇಶ್ ಅವರ ಕೆಲಸವನ್ನು ಬಹಳವಾಗಿ ಮೆಚ್ಚಿಕೊಂಡಿದ್ದರು. ಆದರೆ ಅವರಿಗೆ ಬಾಡಿಗೆಯ ಆ ವರ್ಕ್‌ಶಾಪ್ ಮತ್ತು ಹಾಸ್ಟೆಲ್ ಬಗ್ಗೆ ಬೇಸರವಿತ್ತು. ಆ ದಿನಗಳು, ಅವರೆಲ್ಲರೂ ಎಲ್ಲೇ ಸೇರಲಿ, ಒಂದು ವಿಚಾರದ ಬಗ್ಗೆ ಸದಾ ಚರ್ಚೆ ನಡೆಯುತ್ತಿತ್ತು. ಹೇಗಾದರೂ ಸರಿ ಭಾವೇಶ್ ಅವರದು ಸ್ವಂತದ ಕಾರ್ಖಾನೆ, ವರ್ಕ್‌ಶಾಪ್ ಆಗಬೇಕು. ಅವರ ಅಂಧ ಮಿತ್ರರಿಗೆ ಒಂದು ಒಳ್ಳೆಯ ಹಾಸ್ಟೆಲ್ ಕೂಡಾ ಇರಬೇಕು ಎಂಬುದೇ ಆ ವಿಚಾರವಾಗಿತ್ತು. (ಭಾವೇಶ್ ಎಂದೂ ನೌಕರರು ಎಂಬ ಪದ ಬಳಸುತ್ತಿರಲಿಲ್ಲ. ತನ್ನ ಜೊತೆಯಲ್ಲಿ ದುಡಿಯುತ್ತಿರುವ ಆ ಎಲ್ಲ ಅಂಧರನ್ನು, ಅಂಧ ಮಿತ್ರರು ಎಂದೇ ಉಲ್ಲೇಖಿಸುತ್ತಿದ್ದರು.) ಆದರೆ ಅದು ಸುಲಭವಿರಲಿಲ್ಲ.

ಕಾರಣ, ಮಹಾಬಲೇಶ್ವರ ಬೆಟ್ಟ ಗುಡ್ಡಗಳ ತಾಣ. ಅಲ್ಲಿ ಕಾರ್ಖಾನೆಗೆ ಜಾಗ ಮತ್ತು ಖಾಲಿ ನಿವೇಶನ ಸಿಗುವುದು ಕಷ್ಟವಿತ್ತು. ಒಂದೊಂದು ಅಂಗುಲಕ್ಕೂ ಅಲ್ಲಿ ಮಾರಾಮಾರಿ. ಅಲ್ಲಿ ಪ್ರತಿಯೊಬ್ಬರೂ ತಮ್ಮ ಹೋಟೆಲ್ ಅಥವಾ ರೆಸಾರ್ಟ್ ತೆರೆಯಲು ಬಯಸುತ್ತಿದ್ದರು. ದೊಡ್ಡ ದೊಡ್ಡ ಉದ್ಯೋಗಪತಿಗಳು, ನೇತಾಗಳು, ಸಿನಿಮಾ ತಾರೆಯರು ಇದೇ ಉದ್ದೇಶದಲ್ಲಿ ತೊಡಗಿದ್ದರು. ಹಾಗೆಂದೇ ಮಹಾಬಲೇಶ್ವರದಲ್ಲಿ ನಿವೇಶನದ ಬೆಲೆ ಯಾವಾಗಲೂ ಗಗನ ಮುಟ್ಟಿರುತ್ತದೆ. ಭಾವೇಶ್ ಅವರ ಬಳಿ ಒಂದು ನಿವೇಶನ ಕೊಳ್ಳುವಷ್ಟು ಹಣ ಇರಲಿಲ್ಲ. ಅದಲ್ಲದೆ ಮ್ಯಾನುಫಾಕ್ಚರ್ ಯೂನಿಟ್ ಹಾಕಲು, ಹಾಸ್ಟೆಲ್ ನಿಲ್ಲಿಸಲು ಸಾಕಷ್ಟು ಜಾಗ ಬೇಕಿತ್ತು. ಲಕ್ಷಗಟ್ಟಲೆ ಹಣ ಕೂಡಿಸುವುದು ಭಾವೇಶ್ ಅವರಿಗೆ ಸಾಧ್ಯವಿರಲಿಲ್ಲ.

ಭಾವಸಾ ಬಹಳ ವರ್ಷಗಳು ಓಷೋ ಅವರೊಡನೆ ಇದ್ದವರು. ಭಾವೇಶ್ ಅವರನ್ನು ಭೆಟ್ಟಿಯಾದಾಗಲೆಲ್ಲ ಭಾವಸಾ, ಓಷೋ ಅವರ ಯಾವುದಾದರೂ ಪ್ರಸಂಗವನ್ನು ಹೇಳುತ್ತಿದ್ದರು. ಆ ಪ್ರಸಂಗಗಳಲ್ಲಿ ಭಾವಸಾ ಬಹಳಷ್ಟು ಬಾರಿ ಅಸ್ತಿತ್ವ ಮತ್ತು ಖ್ವಾಯಿಷ್ ಎನ್ನುವ ಎರಡು ಪದಗಳನ್ನು ಪ್ರಯೋಗಿಸುತ್ತಿದ್ದರು. ಅವರು ಭಾವೇಶ್ ಅವರ ಜನ್ಮದಿನದಂದು, ಪೋಲೋ ಕೋಲೋ ಅವರ 'ಆಲ್ಕೆಮಿಸ್ಟ್' ಪುಸ್ತಕವನ್ನು ಉಡುಗೊರೆಯಾಗಿ ಕೊಟ್ಟಿದ್ದರು. ಆ ಪುಸ್ತಕವನ್ನು ನೀತಾ ಎರಡು ಬಾರಿ ಓದಿ ಕೇಳಿಸಿದ್ದರು. ಅದು ಕನಸುಗಳ ಬೆನ್ನತ್ತಿ ಹೋದ ಎಳೆಯ ಕುರುಬನ ಕತೆ. ಆದರೆ ಹೆಚ್ಚೇನೂ ಸಾಧನಗಳಿಲ್ಲದೆ, ಭಾವೇಶ್ ತಮ್ಮ ಅಂತರಂಗದ ಆಸೆಗಳ ಬಗ್ಗೆ ಹೇಳಲು ಸಂಕೋಚಿಸುತ್ತಿದ್ದರು. ಅವರ ಎದೆಯಲ್ಲಿಯೂ, ತಮ್ಮದೇ ಆದ ಒಂದು ಮ್ಯಾನುಫ್ಯಾಕ್ಚರ್ ಯೂನಿಟ್ ಮತ್ತು ಅಂಧ ಮಿತ್ರರಿಗೊಂದು ಹೊಸ ಹಾಸ್ಟೆಲಿನ ಕನಸು ಹೆಮ್ಮರವಾಗಿ ಬೆಳೆದಿತ್ತು. ತಮ್ಮ ಉತ್ಕಟ ಇಚ್ಛೆಯನ್ನು ರಾತ್ರಿ ತಟ್ಟಿ ಮಲಗಿಸಿದರೂ, ಬೆಳಿಗ್ಗೆ ಅವರು ಎಚ್ಚರವಾಗುವ ಮೊದಲೇ ಅವರ ಕನಸು ಎದ್ದು ಕುಳಿತಿರುತ್ತಿದ್ದವು. ಡಾ. ಅಬ್ದುಲ್ ಕಲಾಮರ ಆ ಒಂದು ಮಾತು ನೆನಪಾಗಿತ್ತು – ನಿದ್ರೆಯಲ್ಲಿ ಕಾಣುವವು ಕನಸುಗಳಲ್ಲ; ನಿದ್ರೆ ಮಾಡಲು ಬಿಡದವು ದಿಟವಾದ ಕನಸುಗಳು. ಭಾವೇಶರ ಕನಸುಗಳು ಅವರ ನಿದ್ರೆಯನ್ನು ಕಸಿದಿದ್ದವು.

ಸನ್‌ರೈಸ್ ಕ್ಯಾಂಡಲ್ಸ್ ಅನ್ನು ಈ ಹಂತಕ್ಕೆ ತರಲು ಭಾವೇಶ್ ಬಹಳಷ್ಟು ಶ್ರಮವನ್ನು ಹಾಕಿದ್ದರು. ತಮ್ಮ ಉತ್ಕಟ ಇಚ್ಛೆಯ ಸಾಕಾರಕ್ಕೆ ಮತ್ತಷ್ಟು ಪರಿಶ್ರಮ ಹಾಕಿ ದುಡಿದರು. ಶ್ರಮಕ್ಕೆ ಪರ್ಯಾಯ ಇಲ್ಲವೆಂದು ಅವರಿಗೆ ತಿಳಿದಿತ್ತು. ಭಾವೇಶ್ ಹೇಳುತ್ತಾರೆ

ಶಮಾ ಭೀ ಹವಾ ಮೆ ರೋಶನ್ ಹೋ ಸಕತೀ ಹೈ
ಕಷ್ತೀ ತೂಫಾನೋ ಸೆ ನಿಕಲ್ ಸಾಹಿಲ್ ಸೆ ಜುಡ್ ಸಕತೀ ಹೈ
ಆಜ್ ಜೋ ಛೋಟೀ ಟಹನೀ ಹೈ, ಕಲ್ ಲಂಬೀ ಪತವಾರ್ ಬನ್ ಸಕತೀ ಹೈ
ಆಗ್ ಕೀ ಛೋಟೀ ಚಿಂಗಾರೀ ಕಲ್ ಆಗ್ ಕೀ ಊಂಚೀ ದೀವಾರ್ ಬನ್ ಸಕತೀ ಹೈ
ಮಿಟ್ಟೀ ಜೋ ರೋಂದೀ ಗಯಿ ಪೈರೋ ತಲೆ,
ವಹ್ ಕಲ್ ಊಂಚೇ ಮೀನಾರ್ ಬನ್ ಸಕತೀ ಹೈ
ಬಸ್, ತೂ ಏಕ್ ಬಾರ್ ಮೆಹನತ್ ಕರ್ ಲೇ ಮೆರೆ ದೋಸ್ತ್
ತೇರೀ ಭೀ ಕಿಸ್ಮತ್ ಬದಲ್ ಸಕತೀ ಹೈ

(ಹಣತೆಯೂ ಗಾಳಿಯಲ್ಲಿ ಬೆಳಗಬಲ್ಲದು
ದೋಣಿಯೂ ಬಿರುಗಾಳಿಯಿಂದ ಹಾಯ್ದು ದಡ ಸೇರಬಲ್ಲದು
ಇಂದು ಸಣ್ಣ ರೆಂಬೆಯಾದದ್ದು, ನಾಳೆ ಉದ್ದನೆಯ ಹುಟ್ಟಿನ ಕೋಲಾಗಬಲ್ಲದು
ಬೆಂಕಿಯ ಸಣ್ಣ ಕಿಡಿ ನಾಳೆ ಮುಗಿಲೆತ್ತರದ ಜ್ವಾಲೆಯಾಗಬಲ್ಲದು
ಕಾಲ ಕೆಳಗೆ ತುಳಿದ ಮಣ್ಣೇ ನಾಳೆ ಎತ್ತರೆತ್ತರದ ಕಟ್ಟಡವಾಗಬಲ್ಲದು
ನೀನು ಪರಿಶ್ರಮ ಹಾಕು ಗೆಳೆಯ, ನಿನ್ನ ಅದೃಷ್ಟವೂ ಬದಲಾಗಬಲ್ಲದು)

* * *

(ಸಶೇಷ)